

ಕೆಂಪಾಗಿ ಹರಿಯತೊಡಗಿತು. ಭತ್ತ ಬೆಳೆಯುವುದಿಲ್ಲವೆಂದಾದಮೇಲೆ ಕಟ್ಟು ಯಾತಕ್ಕೆಂದು ಅದನ್ನು ಕೈಬಿಟ್ಟರು. ಉಕ್ಕೇರುವ ಊರಬಾವಿಗಳು ತಳಕಾಣುತ್ತಲೇ ಹೋದವು. ಅದೇ ಹೊತ್ತಿಗೆ ಊರಿಗೆ ವಿದ್ಯುತ್ ಎಂಬ ಮಾಯಕದ ಬೆಳಕು ಬಂದು ಕಪ್ಪುಗಟ್ಟಿದ ಮನೆಯ ಗೋಡೆಯ ಬಿರುಕುಗಳನ್ನೆಲ್ಲ ದೊಡ್ಡದಾಗಿ ತೋರಿಸತೊಡಗಿತು. ಸೋಗೆಯ ಮಾಡಿನ ಮನೆಗಳು ಹೆಂಚನ್ನು ಹೊದ್ದು ಬೆಚ್ಚಗಾದರೆ, ಕಪ್ಪಾದ ಬಿರುಕು ಗೋಡೆಗಳು ಸಿಮೆಂಟಿನಿಂದ ಸಿಂಗಾರಗೊಂಡವು. ಕೃಷಿ ಪಂಪ್‌ಸೆಟ್ಟುಗಳು ಬಾವಿಯ ನೀರನ್ನು ಬರಿದಾಗಿಸಿ, ಮತ್ತೂ ದಾಹ ತೀರದಾಗ ಹೊಳೆಯೆಡೆಗೆ ತಮ್ಮ ನಾಲಿಗೆಯನ್ನು ಚಾಚಿದವು. ಮಣ್ಣು ತೆಗೆದು ತಗ್ಗಾದ ಗದ್ದೆಗಳಲ್ಲಿ ಮತ್ತೆ ಭತ್ತ ಬೆಳೆಯುವುದು ಸಾಧ್ಯವಿಲ್ಲವಾಗಿ ಗುಡ್ಡ ಕಡಿದು ಮಣ್ಣುತುಂಬಿ ಅಡಿಕೆ ಗಿಡಗಳನ್ನು ಅನಿವಾರ್ಯವಾಗಿ ಹಚ್ಚಿದರು. ಮಾರುಮಾರಿಗೆ ನೀರೆತ್ತುವ ಪೈಪುಗಳಿಂದ ಸಿಂಗಾರಗೊಂಡ ಹೊಳೆ ತನ್ನ ಅಂತಿಮ ಉಸಿರನ್ನಾಡತೊಡಗಿದರೂ ಜನಗಳಂತೂ ಕ್ಯಾರೇ ಅನ್ನುತ್ತಿರಲಿಲ್ಲ. ಒಂದಿಷ್ಟು ಪರಿಸರ ಪ್ರೇಮಿ ಹುಡುಗರು ಹೊಳೆಗಳಿಂದ ಪೈಪುಗಳನ್ನು ತೆಗೆಸಲು ಶಕ್ತರಾದರಾದರೂ ಅಲ್ಲಿಯೇ ಪಕ್ಕದಲ್ಲಿರುವ ತಮ್ಮ ಜಮೀನಿನಲ್ಲಿ ಗುಂಡಿತೋಡಿ ಹೊಳೆಯ ನೀರನ್ನೆಳೆದು ಪಂಪ್ ಮಾಡುವವರನ್ನು ಯಾವ ಕಾನೂನು ತಡೆಗಟ್ಟಲು ಸಾಧ್ಯವಿರಲಿಲ್ಲ. ಬೇಸಿಗೆಯ ಒಂದಿಷ್ಟು ದಿನಗಳು ಮೀಯಲೂ ನೀರಿಲ್ಲದಂತೆ ಪರದಾಡಬೇಕಾದ ಕಾಲದಲ್ಲಿಯೇ ನಾವು ಊರನ್ನು ಬಿಟ್ಟು ಬಂದೆವು.

ಆದರೂ ಹೊಳೆ ಇಂದಿಗೂ ನನ್ನನ್ನು ಕಾಡುತ್ತಲೇ ಇರುತ್ತದೆ. ಊರಿನಿಂದ ಅಪರೂಪಕ್ಕೆ ಯಾರದಾದರೂ ಕರೆ ಬಂದಾಗೆಲ್ಲ ಹೊಳೆ ಹೇಗಿದೆ? ಎಂದು ಕಕ್ಕುಲಾತಿಯಿಂದ ವಿಚಾರಿಸುತ್ತೇನೆ. ಇನ್ನೇನೋ ವಿಶೇಷ ಸಂಗತಿಗಳನ್ನು ತಿಳಿಸಲೆಂದು ಕರೆ ಮಾಡಿರುವ ಅವರು ನನ್ನ ಪ್ರಶ್ನೆಗೆ, “ಹೊಳೆಯೆಲ್ಲ ಈಗೆಲ್ಲಿದೆ ಮಾರಾಯ್ತಿ? ಹೊಳೆ ಇರುವ ಜಾಗವೀಗ ವಾಹನ ದಾಟುವ ರಸ್ತೆಯಾಗಿದೆ. ಈಗೆಲ್ಲ ಗುಡ್ಡದಂಚಿಗೆ ಬೋರ್ ಹೊಡೆಸುತ್ತಿದ್ದಾರೆ. ಅದಕ್ಕೇನು ಸಾಮಾನ್ಯ ದುಡ್ಡು ಬೇಕಾ? ನೋಡಬೇಕು, ಈ ಸಲ ನಮ್ಮ ಸರಕಾರ ಬಂದರೆ ಬೋರ್ ಹೊಡೆಸಲು ಸಾಲ ಮಂಜೂರಿ ಮಾಡ್ತೇವೆ ಅಂತ ಈ ಪಕ್ಷದವರು ಹೇಳಿದ್ದಾರಪ್ಪ. ಓಟು ಹಾಕಿ ನೋಡೂದು” ಎಂದು ರಾಜಕೀಯವನ್ನು ಹೊಳೆಯೊಂದಿಗೆ ಥಳಕು ಹಾಕುತ್ತಾರೆ. ಅಲ್ಲಲ್ಲಿ ನೀರಿಗಾಗಿ ಸಣ್ಣ ಸಣ್ಣ ತಡೆಗಳನ್ನು ಇತ್ತೀಚಿನ ಯುವಕರು ಹಾಕುತ್ತಿದ್ದಾರೆ ಎಂದೂ ಸೇರಿಸಿ ಹೊಳೆಯ ಕನಸನ್ನು ಜೀವಂತ ಉಳಿಸುತ್ತಾರೆ. ನನ್ನ ಹೊಳೆ ಹುಚ್ಚನ್ನು ಅರಿತ ಸಣ್ಣವರು ಅಪರೂಪಕ್ಕೊಮ್ಮೆ ಮಳೆಗಾಲದಲ್ಲಿ ಮೈದುಂಬಿ ಹರಿಯುವ ಹೊಳೆಯ ವೀಡಿಯೋಗಳನ್ನು ಕಳಿಸಿ ಖುಶಿಗೊಳಿಸುತ್ತಾರೆ. ಹೊಳೆಯಂಚಿನ ಹೊಳೆದಾಸಾಳದ ಹೂವು ಅರಳಿ ನಳನಳಿಸಿದಂತೆ, ಸಳಸಳನೆ ಹೊಳೆಯೊಳಗೆ ಈಜಾಡುವ ಮೀನುಗಳು ಕಾಲುಗಳಿಗೆ ಕಚಗುಳಿಯಿಟ್ಟಂತೆ ಕನಸಾಗುತ್ತಲೇ ಇರುತ್ತದೆ, ಏಕೆಂದರೆ ನನ್ನೊಳಗೆ ಹೊಳೆ ಸದಾ ಹರಿಯುತ್ತಿರುತ್ತದೆ.

●